ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ 57)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1261/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಬಸವರಾಜ್** | | |
| **ತಂದೆ:ಹೆಸರು** | **ಯಂಕೋಬ** | **ಪಿಡಬ್ಲೂ:** | **3** |
| **ವಯಸ್ಸು** | **40 ವರ್ಷ** | **ಸಿಡಬ್ಲೂ:** | **3** |
| **ಉದ್ಯೋಗ:** | **ವ್ಯವಸಾಯ** | | |
| **ವಾಸ ಸ್ಥಳ:** | **ಬೆಳಗುರ್ಕಿ.** | | |

**ದಿನಾಂಕ 03-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ 2, 4 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1, 2, 4 ರಿಂದ 10 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. 2023 ರ 8 ನೇ ತಿಂಗಳ 12 ನೇ ತಾರೀಖಿನಂದ ಮ.4 ಗಂಟೆಗೆ ಬಾಯಿ ಮಾಡುತ್ತಿದ್ದಾರೆಂದು ನಾನು & ಚಾಸಾ-4 ರವರು ಹೋಗಿ ನೋಡಿದ್ದೆವು. ಆರೋಪಿತರು & ಚಾಸಾ-1 ರವರು ಬಾಯಿಮಾಡಿಕೊಳ್ಳುತ್ತಿದ್ದರು. ಆ ಮೇಲೆ ಏನಾಯಿತು ಎಂದು ನನಗೆ ಗೊತ್ತಿಲ್ಲ, ನಾನು ಮನೆಗೆ ಹೋಗಿದ್ದೆ. ಪೋಲೀಸರು ನನ್ನ ವಿಚಾರಣೆ ಮಾಡಿದ್ದರು, ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ದಿ.29-05-2020 ರಂದು ಮಾಡಸಿರಿವಾರದ 2ನೇ ಆರೋಪಿಯ ಮಗಳಾದ 1ನೇ ಆರೋಪಿಯೊಂದಿಗೆ ಚಾಸಾ-1 ರವರ ಮಗನೊಂದಿಗೆ ಮದುವೆಯಾಗಿತ್ತು ಎಂದರೆ ಸರಿ. ದಿ.12-08-2023 ರಂದು ಸಂ.4 ಗಂಟೆಗೆ ನೀವು & ಚಾಸಾ-4 ರವರು ಹೊಲದಿಂದ ಮನೆಗೆ ಹೊರಟಿದ್ದಿರಿ ಎಂದರೆ ಸರಿ. ಚಾಸಾ-2 ರವರ ಮನೆಯ ಮುಂದಿನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಜೋರಾಗಿ ಬಾಯಿ ಮಾಡುವ ಶಬ್ದ ಕೇಳಿತ್ತು, ನೀವು ಹೋಗಿ ನೋಡಿದಾಗ ಆರೋಪಿತರು ಗುಂಪುಕಟ್ಟಿಕೊಂಡು ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. 4 & 5ನೇ ಆರೋಪಿತರು ಸಂಸಾರ ಕೆಟ್ಟು ಹೋಗಲು ನೀನೇ ಕಾರಣ ಎಂದು ಬೈದಾಡುತ್ತಿದ್ದರು ಎಂದರೆ ಸರಿ. ನಂತರ ಕೈಗಳಿಂದ ಆಕೆಗೆ ಹೊಡಿಬಡಿ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-2 ರವರಿಗೆ 2 & 3 ನೇ ಆರೋಪಿತರು ಸಂಸಾರ ಕೆಟ್ಟು ಹೋಗಲು ನೀನೇ ಕಾರಣ ಎಂದು ಬೈದಾಡುತ್ತಿದ್ದರು ಎಂದರೆ ಸರಿ. ಆರೋಪಿತರು ಚಾಸಾ-2 ಕೈಗಳಿಂದ ಮೈಕೈಗೆ ಹೊಡೆದರು, ನೆಲಕ್ಕೆ ಕೆಡವಿ ಕಾಲಿನಿಂದ ಒದ್ದರು ಎಂದರೆ ಸರಿ. ಆಗ ಅನಾರೋಗ್ಯದಿಂದ ಬಳಲುತ್ತಿದ್ದ ಚಾಸಾ-1 ರವರ ಗಂಡ ಬಿಡಿ ಎಂದು ಕೂಗಿಕೊಂಡಾಗ, 4 & 5ನೇ ಆರೋಪಿತರು ಹೋಗಿ ಚಾಸಾ-1 ರವರ ಗಂಡನಿಗೆ ಕಾಲಿನಿಂದ ಒದ್ದರು ಎಂದರೆ ಸರಿ. ನಂತರ ನೀವು ಚಾಸಾ-4 ರವರು ಹೋಗಿ ಬಿಡಿಸಿಕೊಂಡಿರಿ ಎಂದರೆ ಸರಿ. ಆಗ ಆರೋಪಿತರೆಲ್ಲರೂ ಕೂಡಿಕೊಂಡು ನಮ್ಮ ಮಗಳ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ಈ ಕೇಸಿನ ಸಲುವಾಗಿ ನಾನು 3ನೇ ಬಾರಿ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬರುತ್ತಿದ್ದೇನೆ. ಜಗಳವಾಡಿದ ದಿನವೇ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ. ಜಗಳವಾದ 2 ದಿನಗಳ ನಂತರ ನಾನು ಠಾಣೆಗೆ ಹೋಗಿದ್ದೆ, ಆ ಕಾಲಕ್ಕೆ ನಾನು ಸಹಿ ಮಾಡಿದ್ದೆ. ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೂರು ದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ನಮ್ಮ ಮನೆ ಹಳೆಯ ಬೆಳಗುರ್ಕಿ ಗ್ರಾಮದ ಮಸೀದಿಯ ಬಳಿ ಇದೆ. ಯಮನಮ್ಮನವರ ಮನೆ ಹನುಮನಗೌಡರ ಮನೆಯ ಹೊರಗಡೆ ಇದೆ.

3. ಸಿ.ಸಿ. ರಸ್ತೆ ನಮ್ಮ ಮನೆಯ ಪಕ್ಕದಲ್ಲಿದೆ.

4. ನಾನು ಅಲ್ಲಿಗೆ ಹೋದಾಗ 4 ಗಂಟೆಯಾಗಿತ್ತು. ಸ್ಥಳದಲ್ಲಿ ಒಟ್ಟು 30-40 ಜನರು ಇದ್ದರು. ಆ ಕಾಲಕ್ಕೆ ತುಂಬಾ ಜನ ಇದ್ದರು, ಆರೋಪಿತರ ಪರ ಎಷ್ಟು ಜನ & ದೂರುದಾರರ ಪರ ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು & ಚಾಸಾ-4 ರವರು & ಇನ್ನಿತರರು ಸೇರಿ ಜಗಳ ಬಿಡಿಸಿದ್ದೆವು.

5. 1ನೇ ಆರೋಪಿ & ಚಾಸಾ-2 ರವರು ಮದುವೆ ಪ್ರೇಮ ವಿವಾಹ ಎಂದರೆ ಸರಿ. ಆದ್ದರಿಂದ ಚಾಸಾ-1 ರವರ ಕುಟುಂಬಕ್ಕೂ & ಆರೋಪಿತರ ಕುಟುಂಬಕ್ಕೂ ಧ್ವೇಷ ಇತ್ತು ಎಂದರೆ ಸರಿ. ಈ ಜಗಳಕ್ಕೂ ಮುಂಚೆ ಚಾಸಾ-1 ರವರ ಮನೆಯ ಮುಂದೆ ಜಗಳ ಆಗಿತ್ತು ಎಂದರೆ ಸರಿ.

6. ಚಾಸಾ-4 ನನ್ನ ಮಾವ & ಆತ ನಮ್ಮ ಕುಲಸ್ಥ.

7. ನಿಮ್ಮ & ಚಾಸಾ-1 ರವರ ನಡುವೆ ಚನ್ನಾಗಿದೆ ಎಂದರೆ ಸರಿಯಲ್ಲ. ನಾನು ಉಪ್ಪಳ ಅಡಿವಿಯಲ್ಲಿ ಇರುವ ಜಮೀನಿನಲ್ಲಿ ವ್ಯವಸಾಯದ ಕೆಲಸ ಮಾಡಿ ಬರುತ್ತಿದ್ದೆ. ಸದರಿ ಅಡವಿ ಬೆಳಗುರ್ಕಿ ಗ್ರಾಮದಿಂದ 10-15 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ನಾನು & ಚಾಸಾ-4 ಮೋ.ಸೈ. ಮೇಲೆ ಉಪ್ಪಳದ ಅಡವಿಯಿಂದ ಬಂದಿದ್ದೆವು. ಅಲಬನೂರು ಕೋಡಿ ಮುಖಾಂತರ ಬಂದಿದ್ದೆವು. ಆ ಕಾಲಕ್ಕೆ ನಮ್ಮ ಜಮೀನಿನಲ್ಲಿ ಜೋಳ ಹಾಕಿದ್ದೆವು. ಆಗಸ್ಟ್ ತಿಂಗಳಾಗಿದ್ದರಿಂದ ಆ ಕಾಲಕ್ಕೆ ಜೋಳ ಹಾಕುವುದಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೊಲಕ್ಕೆ ಏಕೆ ಹೋಗಿದ್ದಿರಿ ಎಂದರೆ ಸಾಕ್ಷಿಯು ನೂರೆಂಟು ಕೆಲಸ ಇರುತ್ತದೆ ಹೋಗಿದ್ದೆ ಎನ್ನುತ್ತಾರೆ.

8. ನೀವು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ, ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೊಡ್ಡ ಜಗಳ ನಡೆಯುವಾಗ ನೀವಿಬ್ಬರೇ ಜಗಳ ಬಿಡಿಸಲು ಹೇಗೆ ಸಾಧ್ಯ ಎಂದರೆ ಸಾಕ್ಷಿಯು ನಾವು ಜಗಳ ಬಿಡಿಸಿದ್ದೆವು ಎನ್ನುತ್ತಾರೆ.

9. ಜನರ ಗುಂಪಿನಲ್ಲಿ ಹೋಗಿ ನಾನು ಜಗಳ ಬಿಡಿಸಿದ್ದೆವು. ನಮ್ಮಿಬ್ಬರನ್ನು ಯಾರೂ ತಡೆದಿಲ್ಲ. ಯಾರು ಯಾರು ಬಿಡಿಸಿದ್ದು ಎಂದರೆ ತುಂಬಾ ಜನ ಇದ್ದರು, ಎಲ್ಲರೂ ಸೇರಿ ಬಿಡಿಸಿದ್ದೆವು ಎನ್ನುತ್ತಾರೆ. ಅವರುಗಳನ್ನು ಈಗ ಗುರುತಿಸಲಾಗುವುದಿಲ್ಲ. ನಿಮ್ಮೂರಿನವರು ಯಾರು ಇದ್ದರು ಎಂದರೆ ಸಾಕ್ಷಿಯು ತುಂಬಾಜನ ಇದ್ದರು, ಹೇಗೆ ಹೇಳುವುದು ಎನ್ನುತ್ತಾರೆ. ಜಗಳ ಬಿಡಿಸಿದ್ದು ಮಾತ್ರ ನನಗೆ ಗೊತ್ತು, ಉಳಿದಿದ್ದು ನನಗೆ ಗೊತ್ತಿಲ್ಲ.

10. ಪೋಲೀಸರ ಮುಂದೆ ಜಗಳವಾಡುತ್ತಿದ್ದರು, ನಾವು ಜಗಳ ಬಿಡಿಸಿದ್ದೇವೆ, ನಂತರ ಅವರ ಮನೆಗೆ ಅವರು, ಇವರ ಮನೆಗೆ ಇವರು ಹೋಗಿದ್ದರು ಎಂದು ಹೇಳಿದ್ದೇನೆ. ಅತ್ತೆಸೊಸೆ ಜಗಳವಾಗಿತ್ತು, ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**